ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ರಾಜ್ಯದಲ್ಲಿ ಅರಣ್ಯದಿಂದ ತಂದಂತಹ ಮರಗಳ ಹರಾಜುಗಳ ಬಗ್ಗೆ

೭೫೫ (೫೧೦) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಅರಣ್ಯದಿಂದ ತಂದಂತಹ ಮರಗಳನ್ನು ಹರಾಜು ಮಾಡಲು ಎಷ್ಟು ಹರಾಜು ಕೇಂದ್ರಗಳಿವೆ ?

ಆ) ಹಾಗಿದ್ದಲ್ಲಿ ಪ್ರತಿ ವರ್ಷ ಎಷ್ಟು ಜಾತಿ ಮರಗಳನ್ನು ಹರಾಜು ಮಾಡಲಾಗುತ್ತಿದೆ, ಹಾಗೂ ಯಾವ ಜಾತಿ ಮರಗಳನ್ನು ಹರಾಜು ಮಾಡಲಾಗುತ್ತಿದೆ ಮತ್ತು ಹರಾಜಿನಿಂದ ಪ್ರತಿ ವರ್ಷ ಎಷ್ಟು ಹಣ ಬರುತ್ತದೆ ?

ಶ್ರೀ ಜೆ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅರಣ್ಯದಿಂದ ತಂದ ಮರಗಳನ್ನು ಹರಾಜು ಮಾಡಲು ರಾಜ್ಯದಲ್ಲಿ ಸುಮಾರು ೫೦ ಹರಾಜು ಕೇಂದ್ರಗಳಿವೆ.

ಆ) ಕಳೆದ ೨–೩ ವರ್ಷಗಳಿಂದ ಸರ್ಕಾರಿ ಡಿಪೋಗಳಲ್ಲಿ ಮಾರಾಟವಾಗಿರುವ ಮರದ ಪ್ರಮಾಣ ಈ ರೀತಿ ಇದೆ.

ಬೀಟಿ	೫,೦೦೦ ಕೂ.ಮೀ.
ತೇಗ	೯,೫೦೦ ,,
ಇತರೆ ಜಾತಿ	೭೫,೦೦೦ ,,

ಈ ಮಾರಾಟದಿಂದ ವರ್ಷಕ್ಕೆ ಸುಮಾರು ೩೫ ರಿಂದ ೪೦ ಕೋಟಿ ರೂಪಾಯಿ ಆದಾಯವಿರುತ್ತದೆ.

ಅಧ್ಯಕ್ಷರು.—ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದಿಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಜೆ.ಹೆಚ್. ಪಟೇಲ್.—ಅಧ್ಯಕ್ಷರೇ, ನಾನು ನಾಲ್ಕನೇ ಪಟ್ಟಿಯ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

ಮನೆ ಕಟ್ಟಲು ಉಪಯೋಗಿಸಂವ ಸಾಮಾನುಗಳ ಬಗ್ಗೆ ಹೊಸ ತೆರಿಗೆಗಳು

೯೮ (೭೦) ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು).—ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಮನೆಗಳನ್ನು ಕಟ್ಟಲು ಉಪಯೋಗಿಸುವ ಸಲಕರಣೆಗಳಾದ ಇಟ್ಟಿಗೆ, ಮರಳು ಮತ್ತಿತರ ಮೇಲೆ ಲಾರಿ ಒಂದಕ್ಕೆ ಲೋಡಿಗೆ ೧೫೫–೦೦ ರೂ. ರಾಜಧನ ವಿಧಿಸಿರುವುದರಿಂದ ಸರ್ಕಾರಕ್ಕೆ ಬರುವ ವರಮಾನದ ಮೊತ್ತವೆಷ್ಟು ?

ಆ) ಇದನ್ನು ಪ್ರತಿಭಟಿಸಿ ಸಾವಿರಾರು ಲಾರಿಗಳು ಮುಷ್ಕರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).—

ಅ) ಉಪ ಖನಿಜಗಳ ಮೇಲೆ ರಾಜಧನವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

		ರೂ.ಪೈ	
೧)	ಮರಳು	೧–೫೦	ಮೆ. ಟನ್ನಿಗೆ
೨)	ಇಟ್ಟಿಗೆ	೪–೦೦	ಸಾವಿರಕ್ಕೆ
೩)	ಹೆಂಚು	೬–೦೦	ಸಾವಿರಕ್ಕೆ
೪)	ಕಲ್ಲು ಜಲ್ಲಿ	೨–೫೦	ಮೆ.ಟನ್ನಿಗೆ
೫)	ಇಟ್ಟಿಗೆ ಮಣ್ಣು	೧–೨೫	ಮೆ.ಟನ್ನಿಗೆ

ಆದ ಪ್ರಯುಕ್ತ ಈ ಮೇಲಿನ ಸಲಕರಣೆಗಳ ಮೇಲೆ ಒಂದು ಲಾರಿ ಲೋಡಿಗೆ ೧೫–೦೦ ರೂ.ನಂತೆ ರಾಜಧನವನ್ನು ವಿಧಿಸುವುದು ಉದ್ಭವಿಸುವುದಿಲ್ಲ.

ಆ) ಹೌದು.

ಇ) ರಾಜಧನ ಪಾವತಿಯು ಶಾಸನ ಬದ್ಧವಾದುದು ಸರ್ಕಾರ ರಾಜಧನವನ್ನು ಕಟ್ಟುನಿಟ್ಟಾಗಿ ವಸೂಲು ಮಾಡಲು ನಿರ್ಧರಿಸಿದೆ.

ವಿದ್ಯುತ್ ಇಲಾಖೆಯಲ್ಲಿ ನಷ್ಟ ತಪ್ಪಿಸಲು ಕೈಗೊಂಡ ಕ್ರಮಗಳ ಬಗ್ಗೆ

೯೯ (೧೨೧) ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ (ರೋಣ) .—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿಯ ವಿದ್ಯುತ್ ಇಲಾಖೆಯಲ್ಲಿಯ ಸರ್ವ ರೀತಿಯ ನಷ್ಟವನ್ನು ತಪ್ಪಿಸಲು ಕೈಗೊಂಡ ಕ್ರಮಗಳೇನು ?

(ಆ) ಹಾಗಿದ್ದಲ್ಲಿ ವಿದ್ಯುತ್ ಪಡೆದುಕೊಂಡು ಆಮೇಲೆ ವಿಫಲವಾದ ಬಾವಿಗಳಿಗಾಗಿ ಬಳಸಿದ ಕಂಬ ಹಾಗೂ ತಂತಿಯ ಮರು ಉಪಯೋಗಕ್ಕೆ ಏನಾದರೂ ಪ್ರಯತ್ನಿಸಲಾಗುವುದೆ ?

(ಇ) ಹಾಗಿದ್ದಲ್ಲಿ, ಎಷ್ಟು ? ಹಾಗೂ ಎಷ್ಟು ಮಿಾಟರ್ ತಂತಿಯನ್ನು ಎಲ್ಲೆಲ್ಲಿ ತೆಗೆದಿರಿಸಲಾಗಿದೆ ?

ಶ್ರೀ ಜೆ. ಎಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ಈ ಕೆಳಗೆ ಕಂಡ ಕಾರಣಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನಷ್ಟವನ್ನು ಅನುಭವಿಸುತ್ತಿದೆ.

(೧) ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯ ಪ್ರಮಾಣ ಹೆಚ್ಚಿದ್ದು ವೆಚ್ಚವು ಜಾಸ್ತಿಯಾಗಿದೆ.

(೨) ರಾಜ್ಯದಲ್ಲಿ ಮುಂಗಾರು ಮಳೆಯ ಅಭಾವದಿಂದ ವಿದ್ಯುತ್ ಉತ್ಪಾದನೆಯು ಸಾಕಷ್ಟು ಆಗದೇ ಇದ್ದುದರಿಂದ ವಿದ್ಯುತ್‌ನ್ನು ನೆರೆ ರಾಜ್ಯಗಳಿಂದ ಹೆಚ್ಚು ಬೆಲೆಗೆ ಅಮದುಮಾಡಿಕೊಳ್ಳಲಾಗುತ್ತಿದೆ.

(೩) ನೀರಾವರಿ ಪಂಪುಶೆಟ್ಟುಗಳಿಗೆ ಕೊಡುತ್ತಿರುವ ವಿದ್ಯುತ್ ಜಾಸ್ತಿಯಾಗುತ್ತಿರುವುದರಿಂದಸಧ್ಯಕ್ಕೆ ಒಂದು ದಿನಕ್ಕೆ ೮.೭ ಮಿಲಿಯನ್ನು ಯೂನಿಟಿನಷ್ಟು ವಿದ್ಯುತ್ ಇದಕ್ಕಾಗಿ ಖರ್ಚಾಗುತ್ತಿದೆ.

''ಟ್ಯಾರಿಫ್‌ನ'' ಬೆಲೆ ಈಗ ಒಂದು ಯೂನಿಟ್‌ಗೆ ೧೧.೫ ಪೈಸೆ ಆಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ತಗಲುವ ಬೆಲೆ ೧ ಯೂನಿಟ್‌ಗೆ ಸುಮಾರು ೧೧೦ ಪೈಸೆ.